# ನಿಮ್ಮೊಡನೆ

## ಎಲ್ಲಿದ್ದಾರೆ ಮಹಿಳೆಯರು?

**ವಿಧಾನ ಮಂಡಲದಲ್ಲಿ ಒಟ್ಟು ಆರು ಮಹಿಳಾ ಸದಸ್ಯರನ್ನು ಹೊಂದಿರುವ ಬಿಜೆಪಿ ಸಂಪುಟದಲ್ಲಿ ಮೂವರಿಗಾದರೂ ಪ್ರಾತಿನಿಧ್ಯ ಕೊಡಬೇಕಿತ್ತು. ಆದರೆ ತನ್ನ ಪಕ್ಷದ ಶಾಸಕಿಯರ ಬಗ್ಗೆಯೇ ಮುಖ್ಯಮಂತ್ರಿಯವರಿಗೆ ವಿಶ್ವಾಸ ಇದ್ದಂತಿಲ್ಲ. ವಿಶ್ವಾಸ ಇದ್ದಿದ್ದರೆ, ಮಂತ್ರಿ ಸ್ಥಾನ ಬಿಡಿ, ಕಳೆದ ಎರಡೂವರೆ ವರ್ಷಗಳಿಂದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷತೆಯನ್ನು ಹಾಗೆಯೇ ಖಾಲಿ ಬಿಡುತ್ತಿರಲಿಲ್ಲ.**

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಸಚಿವ ಸಂಪುಟ ಮತ್ತೆ ವಿಸ್ತರಣೆಯಾಗಿದೆ. ಮೂವರನ್ನು ವಜಾ ಮಾಡಿ, ಹೊಸದಾಗಿ ಆರು ಮಂದಿಯನ್ನು ಸಚಿವರನ್ನಾಗಿ ಮಾಡಲಾಗಿದೆ. ಈ ಆರು ಜನರಲ್ಲಿ ಅದೃಷ್ಟವಶಾತ್ ಒಬ್ಬ ಮಹಿಳೆಗೆ ಸ್ಥಾನ ಸಿಕ್ಕಿದೆ! 'ಅದೃಷ್ಟವಶಾತ್' ಎನ್ನಲು ಸಾಕಷ್ಟು ಕಾರಣಗಳಿವೆ. ಮಹಿಳೆಯರ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿರುವುದಾಗಿ ಸದಾ ಭಾಷಣ ಮಾಡುವ ಬಿಜೆಪಿ ಮುಖಂಡರು, ಮಹಿಳೆಯರನ್ನು ರಾಜಕೀಯವಾಗಿ ಅಸಡ್ಡೆಯಿಂದಲೇ ನೋಡುತ್ತಿದ್ದಾರೆ. ಶಾಸನಸಭೆಗೆ ಸ್ಪರ್ಧಿಸಲು ಟಿಕೆಟ್ ಕೊಡುವಾಗಲೂ, ಗೆಲ್ಲಿಸುವಾಗಲೂ ಬಿಜೆಪಿ ಧುರೀಣರು ಮಹಿಳೆಯರ ಬಗ್ಗೆ ಹೊಂದಿರುವ ನಿರ್ಲಕ್ಷ್ಯ ಎದ್ದು ಕಾಣಿಸುತ್ತಿತ್ತು. ಈಗ ಸಂಪುಟ ವಿಸ್ತರಣೆಯಲ್ಲಿ ಮತ್ತೆ ಅಸಡ್ಡೆಯ ಪ್ರದರ್ಶನವಾಗಿದೆ. ಹಾಗೆ ನೋಡಿದರೆ ಸಂಪುಟದ ಏಕೈಕ ಮಹಿಳೆಯಾಗಿ ಶೋಭಾ ಕರಂದ್ಲಾಜೆಯವರು ಮತ್ತೆ ಸೇರ್ಪಡೆಯಾಗಿರುವುದು ನಿರೀಕ್ಷಿತವೇ. ಕೆಲವೇ ತಿಂಗಳ ಹಿಂದೆ ಯಡಿಯೂರಪ್ಪ ಮತ್ತು ರೆಡ್ಡಿ ಸಹೋದರರು ಮಧ್ಯೆ ಖಡಾಖಡಿ ರಾಜಕೀಯ ಕದನ ನಡೆದಾಗ, ಶೋಭಾ ಕರಂದ್ಲಾಜೆಯವರು ಪರಿಸ್ಥಿತಿಯ ಪಿತೂರಿಗೆ ಬಲಿಯಾಗಿ ಸಚಿವ ಸ್ಥಾನ ಕಳೆದುಕೊಂಡಿದ್ದರು. ಯಡಿಯೂರಪ್ಪ ಅವರ ವಿಶೇಷ ಒಲವು ಇರುವುದರಿಂದಷ್ಟೇ ಶೋಭಾ ಮತ್ತೆ ಮಂತ್ರಿಯಾಗಲು ಸಾಧ್ಯವಾಗಿದೆ.

'ಬಿಜೆಪಿ ಸರಕಾರಕ್ಕೂ ಹೆಣ್ಣುಮಕ್ಕಳಿಗೂ ಅದೇಕೋ ಆಗಿಬರುತ್ತಿಲ್ಲ' ಎನ್ನುವಂತೆ ಕಾಣುತ್ತದೆ. ಉಡುಪಿಯ ಶಾಸಕರ ಪತ್ನಿ ನೇಣಿಗೆ ಶರಣಾದ ಪ್ರಕರಣ, ನರ್ಸ್ ಜಯಲಕ್ಷ್ಮಿಯವರ ವಿರುದ್ಧ ಬಹಿರಂಗ ಕದನಕ್ಕೆ ಇಳಿದ ಶಾಸಕರೊಬ್ಬರು ಬಳಿಕ ಮಂತ್ರಿಯಾದದ್ದು, ಇನ್ನೊಬ್ಬ ಸಚಿವರು ಗೆಳೆಯನ ಪತ್ನಿಯ ಮೇಲೆ ಅತ್ಯಾಚಾರ ಆರೋಪ ಎದುರಿಸಿ ಮಂತ್ರಿ ಸ್ಥಾನ ಕಳೆದುಕೊಂಡದ್ದು– ಈ ಎಲ್ಲ ಹಗರಣಗಳೂ ಸಾರ್ವಜನಿಕವಾಗಿ ಬಿಜೆಪಿಯ ಮಾನ ಹರಾಜು ಹಾಕುವಲ್ಲಿ ನೆರವಾಗಿವೆ. ಹಿಂದೆ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಚಿವ ಸಂಪುಟದಲ್ಲೂ ಮಹಿಳಾ ಪ್ರಾತಿನಿಧ್ಯ ಇರಲಿಲ್ಲ. ಅಲ್ಲೂ ಬಿಜೆಪಿಯ ಪಾಲುದಾರಿಕೆ ಇತ್ತು ಎನ್ನುವುದು ಕುತೂಹಲಕರ. ವಿಧಾನ ಮಂಡಲದಲ್ಲಿ ಒಟ್ಟು ಆರು ಮಹಿಳಾ ಸದಸ್ಯರನ್ನು ಹೊಂದಿರುವ ಬಿಜೆಪಿ ಸಂಪುಟದಲ್ಲಿ ಮೂವರಿಗಾದರೂ ಪ್ರಾತಿನಿಧ್ಯ ಕೊಡಬೇಕಿತ್ತು. ಆದರೆ ತನ್ನ ಪಕ್ಷದ ಮಹಿಳಾ ಶಾಸಕಿಯರ ಬಗ್ಗೆಯೇ ಮುಖ್ಯಮಂತ್ರಿಯವರಿಗೆ ವಿಶ್ವಾಸ ಇದ್ದಂತಿಲ್ಲ. ವಿಶ್ವಾಸ ಇದ್ದಿದ್ದರೆ, ಮಂತ್ರಿ ಸ್ಥಾನ ಬಿಡಿ, ಕಳೆದ ಎರಡೂವರೆ ವರ್ಷಗಳಿಂದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷತೆಯನ್ನು ಹಾಗೆಯೇ ಖಾಲಿ ಬಿಡುತ್ತಿರಲಿಲ್ಲ.

ರಾಜ್ಯದ ಸಚಿವ ಸಂಪುಟದಲ್ಲಿ ಮೊದಲು ಸ್ಥಾನ ಗಳಿಸಿದ ಮಹಿಳೆ ಗ್ರೇಸಿ ಟಕ್ಕರ್. ಶಿಕ್ಷಕಿಯಾಗಿದ್ದ ಗ್ರೇಸಿ ಟಕ್ಕರ್ 1957ರಲ್ಲಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರ ಸಂಪುಟದಲ್ಲಿ ಶಿಕ್ಷಣ ಖಾತೆ ಉಪ ಸಚಿವರಾದರು. ಬಳಿಕ ಬಂದ ಮುಖ್ಯಮಂತ್ರಿ ಬಿ.ಡಿ.ಜತ್ತಿಯವರ ಸಂಪುಟದಲ್ಲಿ ಲೀಲಾವತಿ ವಿ ಮಾಗಡಿ ಉಪ ಸಚಿವೆಯಾದರು. 1962ರಲ್ಲಿ ಎಸ್.ಆರ್.ಕಂಠಿಯವರು ಯಶೋಧರಾ ದಾಸಪ್ಪ ಅವರನ್ನು ಸಂಪುಟ ದರ್ಜೆ ಸಚಿವೆಯಾಗಿಸಿ ದಾಖಲೆ ನಿರ್ಮಿಸಿದರು. ಆದರೆ ಸರಕಾರ ಪಾನನಿಷೇಧ ರದ್ದುಗೊಳಿಸಿದ್ದನ್ನು ಪ್ರತಿಭಟಿಸಿ ಗಾಂಧೀವಾದಿ ಯಶೋಧರಾ ಅವರು ರಾಜೀನಾಮೆ ಒಗೆದು ನಿರ್ಗಮಿಸಿದರು. ಸಾಮಾನ್ಯವಾಗಿ ಮಂತ್ರಿಯಾದ ಮಹಿಳೆಯರಿಗೆಲ್ಲ ಹೆಚ್ಚು ಹಣದ ವಹಿವಾಟು ಇಲ್ಲದ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಥವಾ ಕನ್ನಡ– ಸಂಸ್ಕೃತಿ ಇಲಾಖೆ ನೀಡುವುದು ಪದ್ಧತಿ. ಆದರೆ ಮೊದಲ ಬಾರಿಗೆ ದೇವರಾಜು ಅರಸು ಸಂಪುಟದಲ್ಲಿ ಇವಾ ವಾಜ್ ಆಹಾರ ಮತ್ತು ನಾಗರಿಕ ಪೂರೈಕೆ ಪಡೆದದ್ದು ಇತಿಹಾಸ. ಆ ಬಳಿಕ ಮನೋರಮಾ ಮಧ್ವರಾಜ್ ಅವರೂ ಆ ಖಾತೆಯನ್ನು ನೋಡಿಕೊಂಡರು. ಹಾಗೆ ನೋಡಿದರೆ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿ ಶೋಭಾ ಕರಂದ್ಲಾಜೆಯವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಖಾತೆ ಕೊಟ್ಟದ್ದೇ ಈವರೆಗಿನ ಮಹಿಳೆಯರ ದೊಡ್ಡ ಜವಾಬ್ದಾರಿ ಎನ್ನಬಹುದು.

ಮಹಿಳೆಯರಿಗೆ ಈವರೆಗೆ ಅತ್ಯಂತ ಹೆಚ್ಚು ಪ್ರಾತಿನಿಧ್ಯ ಸಿಕ್ಕಿದ್ದು ಎಸ್.ಎಂ.ಕೃಷ್ಣ ಸಚಿವ ಸಂಪುಟದಲ್ಲಿ. ಮೋಟಮ್ಮ (ಸಂಪುಟ ದರ್ಜೆ), ರಾಣಿ ಸತೀಶ್ ಮತ್ತು ನಫೀಸಾ ಫಜಲ್ ಮೂವರಿಗೂ ಸ್ಥಾನ ಸಿಕ್ಕಿತ್ತು. ಈಗಿನ ಬಿಜೆಪಿ ಸರಕಾರದ ವರಸೆ ನೋಡಿದರೆ, ಶೋಭಾ ಜತೆಗೆ ಇನ್ಯಾರೂ ಮಹಿಳೆಯರು ಸಚಿವ ಸ್ಥಾನ ಪಡೆಯುವಂತೆ ಕಾಣುತ್ತಿಲ್ಲ.

ಹೆಣ್ಣು ಭ್ರೂಣಹತ್ಯೆಯಲ್ಲಿ ದಕ್ಷಿಣ ಭಾರತದಲ್ಲೇ ಕರ್ನಾಟಕ 'ನಂಬರ್ ಒನ್' ಎಂದು ಅಧ್ಯಯನ ಹೇಳುತ್ತಿದೆ. ಮಹಿಳೆಯರನ್ನು ರಾಜಕೀಯವಾಗಿ ತುಳಿಯುವುದರಲ್ಲೂ ಕರ್ನಾಟಕ ಸರಕಾರ 'ನಂಬರ್ ಒನ್' ಯಾಕಾಗಬೇಕು?

■ ಬಿ.ಎಂ. ಹನೀಫ್

